

# ಬದುಕುವ ಕಲೆ ಪ್ರಕೃತಿದತ್ತ

■ ಸ್ವಯಂಪ್ರಭಾ

ಹಿರಿಯರು ತಮ್ಮ ಬಾಲ್ಯದ ಅನುಭವಗಳನ್ನು ಮಕ್ಕಳ ಮೇಲೆ ಹೇರುತ್ತಾರೆ. ಆದರೆ, ಇಂದಿನ ಮಕ್ಕಳ ಜಗತ್ತೇ ಭಿನ್ನ.

ಆಡುವ ವಯಸ್ಸಿನ ಮಕ್ಕಳು ಎಷ್ಟೊಂದು ಸುಳ್ಳು ಹೇಳುತ್ತಾರೆ! ಏನೆಲ್ಲ ಕಿತಾಪತಿ ಮಾಡುತ್ತಾರೆ. ಪಾತ್ರೆ ಬೀಳಿಸಿ, ನೀರು ಚೆಲ್ಲಿ – `ನಾನೇನೂ ಮಾಡಿಲ್ಲಮ್ಮಾ, ಅದೇ ಬಿದ್ದೋಯಿತು' ಎಂದು ತಾರಮ್ಮಯ್ಯ ರಾಗ ಹಾಡಿಬಿಡುತ್ತಾರೆ. ಯಾವುದೋ ಕಾಂಪೌಂಡ್ ಏರಿ, ಅಲ್ಲಿಂದ ಬಿದ್ದು, ಮಂಡಿ ತರಚಿ ರಕ್ತ ಸುರಿಯುತ್ತಿದ್ದರೂ, ಏನೂ ಆಗದವರಂತೆ, ಆಟವನ್ನು ಪೂರ್ತಿಗೊಳಿಸಿಯೇ ಮನೆ ಸೇರುತ್ತಾರೆ. ರಾತ್ರಿ ತಡೆಯಲಾರದಷ್ಟು ಕಾಲು ನೋಯುವಾಗಲೇ, ಮಂಡಿ ತರಚಿದೆ ಎಂಬ ವಿಷಯ ಅಮ್ಮನಿಗೋ ಅಪ್ಪನಿಗೋ ಗೊತ್ತಾಗುವುದು.

ಚಿಕ್ಕ ಮಕ್ಕಳು ಹಾಗಿರಲಿ, ತುಸು ದೊಡ್ಡವರಾದ ಮೇಲೂ ನಯ ನಾಜೂಕಿನಿಂದ ಇರುತ್ತಾರೆಂದು ಭಾವಿಸುವಂತಿಲ್ಲ. ಗ್ರೌಂಡಲ್ಲಿ ನಾಲ್ಕು ಸುತ್ತು ಸೈಕಲ್ ತುಳಿದು ಬರುತ್ತೇನೆಂದು ಮನೆಯಲ್ಲಿ ಹೇಳುತ್ತಾರೆ. ಆದರೆ ತೋಚಿದ ದಿಕ್ಕಿಗೆಲ್ಲ ಸೈಕಲ್ ಓಡಿಸಿ, ಮೂಲೆ ಮೂಲೆ, ಗಲ್ಲಿ ಗಲ್ಲಿಯಲ್ಲಿಯೂ ಚಕ್ರಗಳನ್ನು ತಿರುಗಿಸಿ, ತಿರುಗಿಸಲಾಗದ ಕಡೆಯಲ್ಲಿ ಇಡೀ ಸೈಕಲನ್ನೇ ಹೆಗಲ ಮೇಲೆ ಹೊತ್ತುಕೊಂಡು ಮಸಲತ್ತು ಮಾಡದೇ ಇದ್ದರೆ ಅವರ ಬಾಲಬುದ್ಧಿಗೆ ಸಮಾಧಾನವೇ ಇಲ್ಲ.

ಬೈಯುತ್ತಲೇ ಇರುವ ಅಮ್ಮಂದಿರು, ಕಿರುಗಣ್ಣಿನಲ್ಲಿ ನೋಡುತ್ತಲೇ ಗದರಿಸುವ ಅಪ್ಪ–ಅಮ್ಮ, ಮಕ್ಕಳ ಗಲಾಟೆಗಳು ಮಿತಿಮೀರಿದಾಗ ಕೈ ಎತ್ತುವ, ಸಿಡುಕುವ ದೃಶ್ಯಗಳು ಸಾಮಾನ್ಯವಾಗಿ ಹೆಚ್ಚಿನ ಮನೆಗಳಲ್ಲಿ ಕಾಣಿಸುತ್ತವೆ. ಮಕ್ಕಳ ತುಂಟಾಟದ ವಿಧಾನಗಳು ಬೇರೆ ಇರಬಹುದು, ಆದರೆ ನಗರ–ಹಳ್ಳಿ ಎಂಬ ಭೇದವಿಲ್ಲದೆ, ಶ್ರೀಮಂತರು ಬಡವರು ಎಂಬ ಅಂತರವಿಲ್ಲದೇ, ಎಲ್ಲ ಮಕ್ಕಳು ಇಂತಹ ಕಿತಾಪತಿಗಳನ್ನು ಮಾಡುತ್ತಲೇ ಇರುತ್ತಾರೆ.

ಬಾಲ ಬುದ್ಧಿ ಎನ್ನುವುದು ಬಹಳ ಕುತೂಹಲದ, ಹುಮ್ಮಸ್ಸಿನ ಒಂದು ಅವಧಿ. ದೀಪದ ಬೆಳಕಲ್ಲಿ ‘ಒಂದೆರಡು ಭಜನೆ ಹೇಳು ಮಗಾ' ಎಂದರೆ, ದೀಪಕ್ಕೆ ಅಡ್ಡಡ್ಡವಾಗಿ ಬೆರಳು ಆಡಿಸುವ ಮಕ್ಕಳು, ಅದರ ಉಷ್ಣತೆಯನ್ನು ತಾವೇ ಅರಿತುಕೊಳ್ಳುವ ಉಮೇದಿನಲ್ಲಿ ಇರುತ್ತಾರೆ.

ಈ ಹುಮ್ಮಸ್ಸು–ಕುತೂಹಲ ಮಕ್ಕಳಿಗೆ ಇಂದಿನ ನಿಜ ಜಗತ್ತನ್ನು ಪರಿಚಯಿಸುತ್ತದೆ. ಎಷ್ಟೋ ಸಂದರ್ಭದಲ್ಲಿ ಅಪ್ಪ ಮತ್ತು ಅಮ್ಮ, ತಾವೇ ಜಗತ್ತನ್ನು ವ್ಯಾಖ್ಯಾನಿಸುತ್ತ, ಅದನ್ನು ಮಕ್ಕಳಿಗೆ ಪರಿಚಯಿಸಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಪೋಷಕರು ತೋರುವ ಆ ಜಗತ್ತು ಸಂಪೂರ್ಣ ಸತ್ಯವಲ್ಲ. ಪೋಷಕರು ತಮ್ಮ ಬಾಲ್ಯವನ್ನು ನೆನಪಿಸಿಕೊಂಡು, ಅದನ್ನು ಇಂದಿಗೆ ಅನ್ವಯಿಸಿಕೊಂಡು, ತಮ್ಮೊಳಗೆ ಅವಿತಿರುವ ಹುಳುಕುಗಳ ಮರೆಯಲ್ಲಿ ನಿಂತು ಜಗತ್ತಿನ ವ್ಯಾಖ್ಯಾನ ಮಾಡುತ್ತಿರುತ್ತಾರೆ. ಆದರೆ ಮಕ್ಕಳು ಈ ದಿನದ, ಈಗಷ್ಟೇ ಉದಯಿಸಿದ ಹೊಚ್ಚ ಹೊಸ ಸೂರ್ಯನಷ್ಟೇ ತಾಜಾ ಆಗಿರುವ ಜಗತ್ತನ್ನು ಮುಗ್ಧವಾದ ಕಣ್ಣುಗಳಿಂದ, ಲವಲವಿಕೆಯಿಂದ ನೋಡುತ್ತಿರುತ್ತಾರೆ.

ಬೇಕಾದರೆ ಗಮನಿಸಿ, ದೊಡ್ಡವರ ಕಾಳಜಿಯ ಮಾತುಗಳು ಹೇಗಿರುತ್ತವೆ? ‘ಅಲ್ಲಿ ಹೋಗಬೇಡ, ಕೆಟ್ಟಜನರಿರುತ್ತಾರೆ, ಇಲ್ಲಿ ಕುಳಿತವರನ್ನು ಹೆಚ್ಚು ನಂಬಬೇಡ, ಅದು ಬೇಡ, ಇದು ಬೇಡ...' ಹೀಗೇ ಏನೇನೋ. ಆದರೆ ಅವರು ಸೂಚಿಸುವ ಆ ಎಲ್ಲವೂ ದೊಡ್ಡವರು ಸೃಷ್ಟಿಸಿದ ಲೋಕವೇ ಆಗಿರುತ್ತದೆ.

ದಶರಥನು ತನ್ನ ಮಗ ರಾಮನನ್ನು ವಿಶ್ವಾಮಿತ್ರರ ಜೊತೆಗೆ ಕಳುಹಿಸಲು ಎಷ್ಟೊಂದು ಅಳುಕುತ್ತಾನೆ. ಮಗನ ಸಾಮರ್ಥ್ಯದ ಮೇಲೆ ಅವನಿಗೆ ನಂಬಿಕೆ ಇಲ್ಲವೇ? ಅಥವಾ ಬ್ರಹ್ಮರ್ಷಿ ಗುರು ವಿಶ್ವಾಮಿತ್ರರ ಮಾತುಗಳ ಮೇಲೆ ನಂಬಿಕೆ ಇಲ್ಲವೇ? ಅಷ್ಟೇಕೆ, ಕುಲಗುರು ವಸಿಷ್ಠರೇ ಇದ್ದಾರಲ್ಲ ಸಲಹೆ ನೀಡಲು. ಆದರೆ ಪೋಷಕರ ಮನಸ್ಸಿನಲ್ಲಿ ಅಳುಕು ಎನ್ನುವುದು ಪ್ರೀತಿಯ ಇನ್ನೊಂದು ರೂಪವಾಗಿರುತ್ತದೆ. ಅವರು ತಮ್ಮ ಜೀವಿತಾವಧಿಯಲ್ಲಿ ಅನೇಕ ಸೋಲುಗಳನ್ನು ಕಂಡಿರುತ್ತಾರೆ.

ಮಕ್ಕಳಿಗೆ ಹೊಸದನ್ನು ಕಲಿಯುವ ಶಕ್ತಿಯಷ್ಟೇ, ಹೊಸದನ್ನು ಎದುರಿಸುವ ಶಕ್ತಿಯೂ ಪ್ರಬಲವಾಗಿರುತ್ತದೆ. ‘ಮಕ್ಕಳನ್ನು ದೇವರು ಕಾಪಾಡುತ್ತಾರೆ' ಅಥವಾ ‘ಹಸುಳೆಯ ಬಿಗಿ ಮುಷ್ಟಿಗೆ ಹಾವನ್ನೂ ಕೊಲ್ಲುವ ಶಕ್ತಿ ಇದೆ' ಎಂಬ ಹಿರಿಯರ ಮಾತುಗಳನ್ನು ನೀವು ಕೇಳಿರಬಹುದು. ಮಕ್ಕಳ ಸಾಮರ್ಥ್ಯವನ್ನು ಪರೋಕ್ಷವಾಗಿ ಗುರುತಿಸುವ ವಿಧಾನ ಆ ಮಾತುಗಳಾಗಿರಬಹುದು.

ನೆರಳಿನಲ್ಲಿರುವ ಗಿಡವೊಂದು ಸೂರ್ಯನ ಬೆಳಕನ್ನು ಹುಡುಕಿಕೊಂಡು ಬೆಳೆಯುವ ದಾರಿಯನ್ನು ಕಂಡುಕೊಳ್ಳುವ ಹಾಗೆ, ಪ್ರತಿ ಮಗುವೂ ಬದುಕುವ ದಾರಿಯನ್ನು ಹುಡುಕಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಅದು ಸ್ವಾಭಾವಿಕವಾಗಿ ಬರುವ ಸಾಮರ್ಥ್ಯ.

ಕೊರೊನಾ ಸೋಂಕಿನ ಸಂಕಟದ ಕಾಲವನ್ನು ನಿಭಾಯಿಸುತ್ತ ಈಗ ದೈನಂದಿನ ಚಟುವಟಿಕೆಗಳು ಅನಾವರಣಗೊಳ್ಳುತ್ತಿವೆ. ಮಕ್ಕಳು ಶಾಲೆಗೆ ತೆರಳುವುದು ಅನಿವಾರ್ಯವಾಗಿದೆ. ಶಾಲೆ ಅಥವಾ ಕಾಲೇಜಿಗೆ ತೆರಳುವ ಮೊದಲು, ಈ ಹೊಸ ಜಗತ್ತನ್ನು ಎದುರಿಸುವ ಮಾರ್ಗದರ್ಶನವೊಂದು ಅವರಿಗೆ ಬೇಕಾಗಿದೆಯಷ್ಟೇ. ಬೆದರಿಕೆಯ ಮಾತುಗಳಲ್ಲ.

ಅವರಲ್ಲಿ ಭಯವನ್ನು ಬಿತ್ತುವ ಬದಲಾಗಿ, ಅವರ ಸಾಮರ್ಥ್ಯವನ್ನು ಗುರುತಿಸಿ ಗೌರವಿಸುವುದು ಮುಖ್ಯವಾಗಿದೆ. ಅಜ್ಜಮ್ಮ ಹೇಳುವ ‘ಮಕ್ಕಳನ್ನು ದೇವರು ಖಂಡಿತ ಕಾಪಾಡುತ್ತಾನೆ' ಎಂಬ ವಿಶ್ವಾಸ ಪೋಷಕರಲ್ಲಿಯೂ ಇರಲಿ. ಮಕ್ಕಳಲ್ಲಿಯೂ ಆತ್ಮವಿಶ್ವಾಸ ಬೆಳೆಯಲಿ. ಆರೋಗ್ಯದ ಕಾಳಜಿಯ ಅರಿವು, ಮಾರ್ಗದರ್ಶನ ಅವರಿಗೆ ಪೋಷಕರಿಂದ ಮತ್ತು ಶಿಕ್ಷಕರಿಂದ ದೊರೆಯಲಿ. ■